ಶ್ರೀ ಮನೋಹರ ಐನಾಪುರ್:– ಲೋಕೋಪಯೋಗಿ ಇಲಾಖೆಗೆ ಹೇಗೆ ಹೋಗುತ್ತದೆ. ಸಚಿವರು ಇಲ್ಲಿಯೇ ಇದ್ದಾರೆ. ಸಚಿವರಿಂದ ಸ್ಪಷ್ಟ ಉತ್ತರ ಬಂದರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು:– ಅವರು ನನಗೆ ಕೇಳಿಕೊಂಡಿದ್ದಾರೆ. ಅದನ್ನು ತರಿಸಿ ನೋಡಬೇಕಾಗುತ್ತದೆ.

ಶ್ರೀ ಮನೋಹರ ಐನಾಪುರ್:– ಸದನ 26ಕ್ಕೆ ಮುಗಿದುಹೋಗುತ್ತದೆ.

ಚನ್ನಪಟ್ಟಣ ಉಪ–ನೋಂದಾಣಾಧಿಕಾರಿಗಳ ಕಛೇರಿಯ ಸ್ಥಳಾಂತರ

(2049): ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚನ್ನಪಟ್ಟಣ, ಉಪ–ನೋಂದಣಿ ಕಛೇರಿಯನ್ನು ಖಾಸಗೀ ಕಟ್ಟಡಕ್ಕೆ ವರ್ಗಾಯಿಸಲು ಉದ್ದೇಶಿಸಿರುವುದು ನಿಜವೇ;

ಆ. ಹಾಗಿದ್ದಲ್ಲಿ, ಉಪ–ನೋಂದಣಿ ಕಛೇರಿಯನ್ನು ಸರ್ಕಾರಿ ಕಟ್ಟಡದಿಂದ ಖಾಸಗಿ ಕಟ್ಟಡಕ್ಕೆ ವರ್ಗಾಯಿಸಲು ಕಾರಣವೇನು;

ಇ. ವರ್ಗಾಯಿಸಲು ಉದ್ದೇಶಿಸಿರುವ ಖಾಸಗೀ ಕಟ್ಟಡವು ಎಲ್ಲಾ ವಿಧದಲ್ಲಿಯೂ ಸೂಕ್ತವಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ, ದಾಖಲೆ ಕೊಠಡಿಯನ್ನು ದುರಸ್ತಿ ಮಾಡಿದ ನಂತರ ಹಾಲಿ ಸರ್ಕಾರದ ಕಟ್ಟಡದಲ್ಲಿಯೇ ಮುಂದುವರಿಯುವುದೇ (ಸರ್ಕಾರಿ ಕಟ್ಟಡ) ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಇಲ್ಲ

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ದಾಖಲೆ ಕೊಠಡಿಯನ್ನು ದುರಸ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಸಾದತ್ ಆಲಿಖಾನ್:– ಮಾನ್ಯ ಅಧ್ಯಕ್ಷರೆ, ಚನ್ನಪಟ್ಟಣ ಉಪನೋಂದಣಿ ಕಛೇರಿಯನ್ನು ಖಾಸಗಿ ಕಟ್ಟಡಕ್ಕೆ ವರ್ಗಾಯಿಸುವುದಿಲ್ಲ ಎಂದು ಉತ್ತರ ಬಂದಿದೆ. ಆದರೆ ಈ ಡಿಪಾರ್ಟ್‌ಮೆಂಟ್‌ನವರು ಇನ್ಸ್‌ಪೆಕ್ಷನ್ ಮಾಡಿ ರೆಕ್‌ಮೆಂಡ್ ಮಾಡಿದ್ದಾರೆ. ಪ್ರೈವೇಟ್ ಬಿಲ್ಡಿಂಗ್‌ಗೆ ಹೋಗಬೇಕು, ಈ ಬಿಲ್ಡಿಂಗ್ ಸರಿಯಾಗಿಲ್ಲ, ಲೀಕ್ ಆಗುತ್ತಿದೆ, ಈ ಬಿಲ್ಡಿಂಗ್‌ನ ರೆಕಾರ್ಡ್ಸ್ ರೂಮ್ ಸರಿಯಾಗಿಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕೆ ತಾವು ಶಿಫ್ಟ್ ಮಾಡುವುದಿಲ್ಲ ಅಂತ ಉತ್ತರವನ್ನು ಕೊಟ್ಟಿದ್ದೀರಿ. ಈಗ ಇರುವ ಬಿಲ್ಡಿಂಗ್ located in city, ತಾಲ್ಲೂಕ್ ಆಫೀಸ್ ಅಲ್ಲೇ ಇದೆ, ಬಿ.ಡಿ.ಓ. ಆಫೀಸ್ ಅಲ್ಲೇ ಇದೆ. ಅಗ್ರಿಕಲ್ಚರಲ್ ಆಫೀಸ್ ಅಲ್ಲೇ ಇದೆ. ಆ ಕಾಂಪಾಂಡ್‌ನಲ್ಲೇ ಇರಬೇಕು. ಇದನ್ನು ಶಿಫ್ಟ್ ಮಾಡಬಾರದು. ರೆಕಾರ್ಡ್ಸ್ ರೂಮ್ ಲೀಕ್ ಆಗುತ್ತಿದೆ, ಆಫೀಸ್ ಫರ್ನಿಚರ್ ಇಲ್ಲ, ಅದಕ್ಕೆ ಶಿಫ್ಟ್ ಮಾಡಬೇಕೆಂದು ಏನು ಮಾಡಿದ್ದಾರೆ ಅದನ್ನು ಮಾಡಬಾರದೆಂದು ತಮಗೆ ಹೇಳುತ್ತೇನೆ.

SRI M. RAJASHEKARA MURTHY:– The recommendations made are not

going to be a decision. We are going to repair the old building and continue the office there itself.

ನೆರೆ ಹಾವಳಿಯಿಂದ ಬೆಳೆ ನಾಶ ಆದವರಿಗೆ ಹೆಕ್ಟೇರಿಗೆ 500.00 ರೂ.ನಂತೆ ಪರಿಹಾರ ಒದಗಿಸಿರುವ ಜಿಲ್ಲಾವಾರು ಮಾಹಿತಿ

(116): ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ನೆರೆ ಹಾವಳಿಯಿಂದ ಬೆಳೆ ನಾಶವಾದ ಬಗ್ಗೆ ಜಿಲ್ಲಾವಾರು ವಿವರ ನೀಡಲಾಗುವುದೇ;

ಆ. ಹೆಕ್ಟೇರಿಗೆ 500.00 ರೂಪಾಯಿಯಂತೆ ಪ್ರತಿ ಜಿಲ್ಲೆಯಲ್ಲಿ ಈವರೆಗೆ ಬೆಳೆ ನಾಶ ಆದವರಿಗೆ ಎಷ್ಟು ಪರಿಹಾರ ಒದಗಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ನೆರೆಹಾವಳಿಯಿಂದ ರಾಜ್ಯದ 14 ಜಿಲ್ಲೆಗಳಲ್ಲಿ ಕೃಷಿ ಬೆಳೆ ನಾಶವಾಗಿದ್ದು ವಿವರ ಈ ಕೆಳಕಂಡಂತಿದೆ:–

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬೆಳೆ ನಾಶ	
		ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ)	ಅಂದಾಜು ನಷ್ಟ (ಲಕ್ಷರೂ.ಗಳಲ್ಲಿ)
1.	ರಾಯಚೂರು	1.15	8383.76
2.	ಬಳ್ಳಾರಿ	0.47	2082.09
3.	ಧಾರವಾಡ	0.57	1603.17
4.	ಚಿತ್ರದುರ್ಗ	0.26	872.90
5.	ಶಿವಮೊಗ್ಗ	0.18	484.00
6.	ಚಿಕ್ಕಮಗಳೂರು	0.05	87.95
7.	ಮೈಸೂರು	0.02	33.55
8.	ಉತ್ತರ ಕನ್ನಡ	0.06	200.00
9.	ದಕ್ಷಿಣ ಕನ್ನಡ	0.05	45.82
10.	ಹಾಸನ	0.01	27.81
11.	ಕೊಡಗು	0.02	20.75
12.	ಬೆಳಗಾಂ	0.26	100.40
13.	ಬಿಜಾಪುರ	0.02	98.12
14.	ತುಮಕೂರು	0.03	6.30
	ಒಟ್ಟು	3.132	14046.62

ಆ. ಪರಿಹಾರ ನೀಡಿರುವ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ –